# ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ

(ಕರ್ನಾಟಕ ಸರ್ಕಾರದ ಅಧೀನಕ್ಕೆ ಒಳಪಟ್ಟಿದೆ)

#39, ಶಾಂತಿಗೃಹ, ಭಾರತ್ ಸ್ಕೌಟ್ಸ್ & ಗೈಡ್ಸ್ ಕಟ್ಟಡ, ಅರಮನೆ ರಸ್ತೆ,
ಬೆಂಗಳೂರು–560001. E-mail: **kredlmd@gmail.com**
Website:**http://www.kredlinfo.in**

## ಪ್ರಕಟಣೆ

**ಕೇಂದ್ರ ಸರ್ಕಾರದ ಎಮ್.ಎನ್.ಆರ್.ಇ ಹಾಗೂ 'ಸೋಲಾರ್ ಎನರ್ಜಿ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್ ವತಿಯಿಂದ ಸೌರ ಪಾರ್ಕ್‌ಗಳನ್ನು ಸ್ಥಾಪಿಸಲು ರೈತರ ಭೂಮಿಯನ್ನು ಗುತ್ತಿಗೆ ಆಧಾರದ ಮೇಲೆ ಪಡೆಯುವ ಬಗ್ಗೆ**

ಕರ್ನಾಟಕ ರಾಜ್ಯ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ (KREDL) ಹಾಗೂ ಭಾರತ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ ಸೋಲಾರ್ ಎನರ್ಜಿ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್ (SECI) ಇವರ ಜಂಟಿ ಸಹಭಾಗಿತ್ವ ಸಂಸ್ಥೆಯಾದ ಮೆ. ಕರ್ನಾಟಕ ಸೋಲಾರ್ ಪವರ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಲಿಮಿಟೆಡ್ (KSPDCL) ಸಹಯೋಗದೊಂದಿಗೆ ಪಾವಗಡ ಸೋಲಾರ್ ಪಾರ್ಕ್ ಮಾದರಿಯಲ್ಲಿ ರಾಜ್ಯದಲ್ಲಿ, ತಲಾ 2500 ಮೆ.ವ್ಯಾ ಸಾಮರ್ಥ್ಯದ ಅಲ್ಟ್ರಾ ಮೆಗಾ ರಿನ್ಯೂವೇಬಲ್ ಎನರ್ಜಿ ಪಾರ್ಕ್‌ಗಳನ್ನು (UMREPP) ಭಾರತ ಸರ್ಕಾರದ ಎಂ.ಎನ್.ಆರ್.ಇ. ಹಾಗೂ ಸೋಲಾರ್ ಎನರ್ಜಿ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್ ರವರ ವತಿಯಿಂದ ಈ ಕೆಳಕಂಡ 3 ಜಿಲ್ಲೆಗಳಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ.

**1. ಬೀದರ್ 2. ಗದಗ 3. ಕೊಪ್ಪಳ**

ಈ ಮೇಲ್ಕಂಡ ಮೂರು ಜಿಲ್ಲೆಗಳಲ್ಲಿ ಸೌರ ಪಾರ್ಕ್‌ಗಳನ್ನು ಸ್ಥಾಪಿಸಲು ಸುಮಾರು 12500 ಎಕರೆ ಜಮೀನು ಪ್ರತಿ ಜಿಲ್ಲೆಯಲ್ಲಿ ಅವಶ್ಯಕತೆ ಇರುತ್ತದೆ. ಈ ಭೂಮಿಯನ್ನು ಸುಮಾರು 28 ವರ್ಷಗಳ ಅವಧಿಗೆ ವಾರ್ಷಿಕ ಗುತ್ತಿಗೆ ಆಧಾರದ ಮೇಲೆ ಹೊಂದಲು ಸಂಸ್ಥೆ ಬಯಸಿದೆ. ಗುತ್ತಿಗೆ ಪಡೆದ ಜಮೀನನ್ನು ಪ್ರತಿ ಎಕರೆ ವಿಸ್ತೀರ್ಣಕ್ಕೆ ವಾರ್ಷಿಕ ಗುತ್ತಿಗೆ ದರವನ್ನು ನಿಗದಿಪಡಿಸಲಾಗುವುದು.

ಈ ಯೋಜನೆಗೆ ಒಂದೇ ಕಡೆ ಕನಿಷ್ಠ 1000 ಎಕರೆ ಭೂಮಿ ನೀಡಲು ಆಸಕ್ತಿಯುಳ್ಳ ಈ ಜಿಲ್ಲೆಯ ರೈತರು ತಮ್ಮ ಒಪ್ಪಿಗೆಯನ್ನು ಲಿಖಿತವಾಗಿ **18.11.2019ರ** ಒಳಗೆ ಸಂಬಂಧಪಟ್ಟ ದಾಖಲೆಗಳೊಂದಿಗೆ ವಿವರಗಳನ್ನು ಈ ಕಛೇರಿಗೆ ನೀಡಬೇಕೆಂದು ಕೋರಲಾಗಿದೆ.

ಯೋಜನೆಗೆ ಅವಶ್ಯಕ ಜಮೀನುಗಳ ಗುತ್ತಿಗೆ ಪಡೆಯುವುದು ವ್ಯವಸ್ಥಾಪಕ ನಿರ್ದೇಶಕರು, KREDL ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ, KSPDCL ಇವರ ಆಯ್ಕೆಯ ಮೇರೆಗೆ ಅಂತಿಮಗೊಳಿಸಲಾಗುವುದು.

ಈ ಪ್ರಕಟಣೆ ಬಗ್ಗೆ ಹೆಚ್ಚಿನ ವಿವರಗಳನ್ನು ಬಯಸಿದಲ್ಲಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 9620944345.

ಸಹಿ/- ಪ್ರಧಾನ ವ್ಯವಸ್ಥಾಪಕರು